

# 'ಅಮರ'ನಿಗೆ ಒಲವಿನ ಉಡುಗೊರೆ

ಬೆಂಗಳೂರಿನ ದೇವಸ್ಥಾನವೊಂದರ ಆವಾರದಲ್ಲಿ ಕೂತಿದ್ದ ಅಂಬಿಯ ಮುಖದಲ್ಲಿ ಅಂದು ಹೆಮ್ಮೆಯ ಬೆಳಕು ಎದ್ದು ಕಾಣುತ್ತಿತ್ತು. ಪಕ್ಕದಲ್ಲಿದ್ದ ಮಗ ಅಭಿಷೇಕನ ಕಡೆಗೆ ಅವರು ಮತ್ತೆ ಮತ್ತೆ ನೋಡುತ್ತಿದ್ದರು. ಅದು ಅಭಿಷೇಕ್ ನಾಯಕನಾಗಿ ನಟಿಸುತ್ತಿರುವ 'ಅಮರ್' ಚಿತ್ರದ ಮುಹೂರ್ತ ಸಂದರ್ಭ. 'ರೆಬಲ್'ಗೆ ಮಗನನ್ನು ಬಣ್ಣದ ಲೋಕಕ್ಕೆ ಪರಿಚಯಿಸುವ ಹೆಮ್ಮೆ.

ಡಿಸೆಂಬರ್‌ನಲ್ಲಿ ದೊಡ್ಡ ಕಾರ್ಯಕ್ರಮ ಮಾಡಿ ರಜನೀಕಾಂತ್, ಅಮಿತಾಭ್ ಬಚ್ಚನ್ ಸೇರಿದಂತೆ ಭಾರತೀಯ ಚಿತ್ರರಂಗದ ಗಣ್ಯರನ್ನು ಕರೆದು ಮಗನನ್ನು ಲಾಂಚ್ ಮಾಡುವ ಕನಸೂ ಅವರಿಗಿತ್ತು. ಆದರೆ ಡಿಸೆಂಬರ್ ತಿಂಗಳಿಗೆ ಅಡಿಯಿಡುವ ಮೊದಲೇ ಅಂಬಿ ನಮ್ಮನ್ನು ಅಗಲಿದ್ದಾರೆ. ಅಭಿ ತೆರೆಯ ಮೇಲೆ ಅಬ್ಬರಿಸುವುದನ್ನು ನೋಡಲು ಅಂಬಿ ಇಲ್ಲ.

ನಾಗಶೇಖರ್ ನಿರ್ದೇಶನದ 'ಅಮರ್' ಚಿತ್ರದ ಜತೆಗೆ ಅಂಬಿಯ ನೆನಪುಗಳು ಹಲವು ಕಾರಣಗಳಿಗೆ ಹೆಣೆದುಕೊಂಡಿದೆ. ಅಮರ್ ಅವರ ಮೊದಲ ಹೆಸರು. ಜತೆಗೆ ಈ ಚಿತ್ರದಲ್ಲಿ ಅಂಬರೀಷ್ ನೆನಪನ್ನು ಚಿರಸ್ಥಾಯಿಗೊಳಿಸಲಿಕ್ಕೆ ಚಿತ್ರತಂಡ ಇನ್ನೊಂದು ಯೋಚನೆಯನ್ನೂ ಮಾಡಿದೆ. ಅಂಬರೀಷ್ ನಟನೆಯ ಸೂಪರ್‌ಹಿಟ್ 'ಒಲವಿನ ಉಡುಗೊರೆ' ಚಿತ್ರದ 'ಒಲವಿನ ಉಡುಗೊರೆ ಕೊಡಲೇನು' ಹಾಡನ್ನು ಅಮರ್‌ನಲ್ಲಿ ಮರುಬಳಕೆ ಮಾಡಿಕೊಳ್ಳಲಾಗುತ್ತಿದೆ. ಈ ಹಾಡಿಗೆ ಅಮರ್ ಮತ್ತು ತಾನ್ಯಾ ಹೋಪ್ ಹೆಜ್ಜೆ ಹಾಕಲಿದ್ದಾರಂತೆ.

ಮಗನ ಮೊದಲ ಸಿನಿಮಾದ ಮೊದಲರ್ಧವನ್ನು ಅಂಬಿ ನೋಡಿದ್ದರಂತೆ. ದ್ವಿತಿಯಾರ್ಧ ನೋಡಲು ಅವರೇ ಇಲ್ಲ. ತಂದೆಯ ನೆನಪಿನ ದಾರಿದೀಪವನ್ನು ಮನಸಲ್ಲಿ ಇಟ್ಟುಕೊಂಡು ಬಣ್ಣದ ಲೋಕದ ಹೊಸ್ತಿಲು ತುಳಿಯುತ್ತಿರುವ ಅಭಿಷೇಕ್‌ಗೆ ಅಭಿಮಾನಿಗಳೂ 'ಗೆಲುವಿನ ಉಡುಗೊರೆ' ಕೊಡಬಹುದು.



# ಅಮ್ಮನ ಪಾತ್ರದಲ್ಲಿ ಅನು

ಅಂದು 'ಅನುಕ್ತ' ಎಂಬ ಸಿನಿಮಾ ಧ್ವನಿಸಾಂದ್ರಿಕೆ ವೇದಿಕೆಯ ಮೇಲೆ ಮಾತನಾಡುತ್ತ ನಿಂತಿದ್ದ ನಟಿ ಅನುಪ್ರಭಾಕರ್ ಕೊಂಚ ಗಡಿಬಿಡಿಯಲ್ಲಿದ್ದರು. ಕಣ್ಣುಗಳಲ್ಲಿ ಯಾವುದೋ ಕಾತರ ಇಣುಕುತ್ತಿತ್ತು. ಮೈಕ್ ಸಿಕ್ಕಿದ್ದೇ ಅವರು ಹೇಳಿದ ಮೊದಲ ಮಾತೇ 'ನಾನು ಕೊಂಚ ಅವಸರದಲ್ಲಿದ್ದೇನೆ'. ಆ ಅವಸರಕ್ಕೆ ಕಾರಣವನ್ನೂ ಅವರು ಹೇಳದೇ ಇರಲಿಲ್ಲ. ತಮ್ಮ ಮೂರು ತಿಂಗಳ ಮಗುವನ್ನು ಅವರು ಮನೆಯಲ್ಲಿ ಬಿಟ್ಟು ಆ ಕಾರ್ಯಕ್ರಮಕ್ಕೆ ಬಂದಿದ್ದರು.

2016ರಲ್ಲಿ ನಟ ರಘು ಮುಖರ್ಜಿ ಮತ್ತು ಅನುಪ್ರಭಾಕರ್ ಮದುವೆಯಾಗಿದ್ದರು. ಇದೇ ವರ್ಷ ಆಗಸ್ಟ್ 15ರಂದು ಅನುಪ್ರಭಾಕರ್ ಹೆಣ್ಣುಮಗುವಿಗೆ ಜನ್ಮವಿತ್ತಿದ್ದಾರೆ.

ಅವರು ನಟಿಸಿದ 'ಅನುಕ್ತ' ಸಿನಿಮಾ ಇದೀಗ ತೆರೆಗೆ ಬರುವ ಸಿದ್ಧತೆಯಲ್ಲಿದೆ. 'ಆಟಗಾರ' ಚಿತ್ರದ ನಂತರ ನಾನು ನಟನೆಯಿಂದ ದೂರವಿದ್ದೆ. ಆದರೆ ಈ ಚಿತ್ರದಲ್ಲಿನ ಪಾತ್ರ ಮತ್ತು ಸಿನಿಮಾದ ಕೆಲವು ಸನ್ನಿವೇಶಗಳು ನನ್ನನ್ನು ಮರಳಿ ಬಣ್ಣ ಹಚ್ಚುವಂತೆ ಮಾಡಿವೆ' ಎಂಬುದು ಅವರು ಚಿತ್ರದ ಕುರಿತು ನೀಡಿದ ವಿವರಣೆ. ಸದ್ಯಕ್ಕೆ ಮಗುವಿನ ಪಾಲನೆಯಲ್ಲಿ ಅನುಪ್ರಭಾಕರ್ ಮುಳುಗಿಹೋಗಿದ್ದಾರೆ. ಆ ತನ್ಮಯತೆಯಲ್ಲಿಯೇ ಬಣ್ಣದ ಬದುಕಿನ ಕರೆಗಂಟೆಗೂ ಅವರು ಕಿವಿಯಾಗುತ್ತಿದ್ದಾರೆ. ನಿಜಜೀವನದಲ್ಲಿ ಅನು ನಿರ್ವಹಿಸುತ್ತಿರುವ ಅಮ್ಮನ ಪಾತ್ರ, ಅವರೊಳಗಿನ ನಟಿಯ ಹೊಳಪನ್ನೂ ಹೆಚ್ಚಿಸಬಹುದೇ?

■ ಪದ್ಮನಾಭ ಭಟ್